ಮಧ್ಯವರ್ತಿಗಳು ದಾಖಲಾತಿಗಳನ್ನು ಬರೆದು ಪೂರೈಸಿದರು. ಒಂದು ಒಳ್ಳೆಯ ದಿನವನ್ನು ನೋಡಿ, ಕೊತುಲ್‌ಪುರ್‌ಗೆ ಹೋಗಿ ದಾಖಲೆಗಳನ್ನು ರಿಜಿಸ್ಟರ್ ಮಾಡಿಸಿದರು. ಬಳಿಕ ಮಾವಂದಿರು ದಾಖಲೆಗಳಿಗೆ ಅನುಸಾರವಾಗಿ ಜಮೀನುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಶ್ರೀಮಾತೆಯವರು ತಮಗೆ ಕಲ್ಕತ್ತೆಗೆ ಹೋಗಲು ಇಚ್ಛೆಯುಂಟಾಗಿದೆ ಎಂದು ಯೋಗಿನ್-ಮಾ ಹಾಗೂ ಗೋಲಾಪ್-ಮಾಗೆ ತಿಳಿಸಿದರು. ಪ್ರಯಾಣದ ದಿನವನ್ನು ಶರತ್ ಮಹಾರಾಜರು ಗೊತ್ತು ಮಾಡಿದರು. ಅಂದೇ ಹೊರಡಲು ಶ್ರೀಮಾತೆಯವರೂ ಸಮ್ಮತಿಸಿದರು. ಮೇ ೨೧ರಂದು ಶುಕ್ರವಾರ ನಾಲ್ಕು ಗಾಡಿಗಳು ಬಂದವು. ಸಾಯಂಕಾಲ ಶ್ರೀಮಾತೆಯವರು ಹೊರಟರು. ದಾರಿ ಮರೆತು ಹೋದದ್ದರಿಂದ ಪ್ರಯಾಣದ ನಡುವೆ, ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಕೋಯಲ್‌ಪಾರಾದ ಬಳಿ ಒಂದು ದೇವಾಲಯದ ಎದುರು ಗಾಡಿ ನಿಲ್ಲಿಸಲು ಶರತ್ ಮಹಾರಾಜ್ ಹೇಳಿದರು. ಗಾಡಿಗಳು ನಿಂತವು. ದೇವಾಲಯದ ವರಾಂಡದಲ್ಲಿ ಕುಳಿತು ಊಟ ಇತ್ಯಾದಿಗಳನ್ನು ಮಾಡಿ ಮುಗಿಸಿ, ಗಾಡಿಗಳು ಮುಂದಕ್ಕೆ ಹೊರಟವು. ಬೆಳಿಗ್ಗೆ ಸುಮಾರು ಎಂಟು ಗಂಟೆಯ ಹೊತ್ತಿಗೆ ಗಾಡಿ ಜಯಪುರದಲ್ಲಿ ಬಂದು ನಿಂತಿತು. ಅಲ್ಲಿ ಸ್ನಾನಾದಿಗಳನ್ನು ಮಾಡಿ ಮುಗಿಸಿ, ಗಾಡಿಯಲ್ಲಿ ಹತ್ತಿ ಕುಳಿತೆವು. ಅಲ್ಲಿಂದ ಮುಂದೆ ವಿಷ್ಣುಪುರದ ಕಾಡು ಆರಂಭವಾಗುತ್ತದೆ. ನಮ್ಮ ನಾಲ್ಕು ಗಾಡಿಗಳಲ್ಲಿ - ಒಂದರಲ್ಲಿ ಶ್ರೀಮಾತೆ, ರಾಧು ಹಾಗು ಮಾಕು; ಎರಡನೆಯದರಲ್ಲಿ ಯೋಗಿನ್-ಮಾ ಮತ್ತು ಗೋಲಾಪ್-ಮಾ; ಮೂರನೆಯದರಲ್ಲಿ ಶರತ್ ಮಹಾರಾಜ್ ಒಬ್ಬರೇ ಇದ್ದರು; ಹಾಗೂ ನಾಲ್ಕನೆಯದರಲ್ಲಿ ಆಶುತೋಷ ಎಂಬ ಜಯರಾಮಬಾಟಿಯ ಒಬ್ಬ ಭಕ್ತ ಹಾಗೂ ನಾನು ಇದ್ದೆವು. ಗಾಡಿಗಳು ವಿಷ್ಣುಪುರ ಸ್ಟೇಷನ್ನಿಗೆ ಬಂದು ತಲುಪಿದವು. ಸಾಮಾನು ಸರಂಜಾಮುಗಳನ್ನು ಕೂಲಿಗಳ ತಲೆಯ ಮೇಲೆ ಹೊರಿಸಿ ನಾವು ಸ್ಟೇಶನ್ನಿಗೆ ಬಂದೆವು. ಟಿಕೆಟ್‌ಗಳನ್ನು ತೆಗೆದುಕೊಂಡು ಬರುವಷ್ಟರಲ್ಲಿ ಟ್ರೈನ್ ಬಂದುಬಿಟ್ಟಿತು. ವಿಷ್ಣುಪುರದಲ್ಲಿ ಟ್ರೈನ್ ಎರಡು ನಿಮಿಷ ಮಾತ್ರ ನಿಲ್ಲುತ್ತದೆ. ಅವಸರವಾಗಿ ಶ್ರೀಮಾತೆಯವರನ್ನು ಒಂದು ಇಂಟರ್ ಕ್ಲಾಸಿನ ಕೋಣೆಯಲ್ಲಿ ಕೂರಿಸಿದೆವು. ಆ ಕೋಣೆಯಲ್ಲಿ ಪಶ್ಚಿಮ ರಾಜ್ಯದ ಒಬ್ಬ ಹಣ್ಣುಹಣ್ಣು ಮುದುಕ ಮುಸಲ್ಮಾನ ಹಾಗೂ ಅವನ ಪತ್ನಿ ಇದ್ದರು. ರೈಲು ಹೊರಟಿತು.

ಮರುದಿನ, ಅಂದರೆ ೧೯೧೯ರ ಮೇ ೨೩ರಂದು ಶ್ರೀಮಾತೆಯವರು 'ಉದ್ಬೋಧನ'ಕ್ಕೆ ಮೊದಲ ಬಾರಿಗೆ ಶುಭಾಗಮನಗೈದರು. ಅಂದು ರಾತ್ರಿ ನಾನು 'ಉದ್ಬೋಧನ'ದಲ್ಲೇ ಉಳಿದುಕೊಂಡಿದ್ದು, ಮರುದಿನ ಬೇಲೂರು ಮಠಕ್ಕೆ ಮರಳಿದೆ.

೧೯೧೩ರ ಆಗಸ್ಟ್ ತಿಂಗಳಲ್ಲಿ ಮೇದಿನೀಪುರ ಜಿಲ್ಲೆಯ ಕಾಂಥಿ ಎಂಬಲ್ಲಿ ನೆರೆಯುಂಟಾಗಿತ್ತು. ರಾಮಕೃಷ್ಣ ಮಿಷನ್ ತನ್ನ ಸೇವಾಕಾರ್ಯವನ್ನು ಎಂಟು ತಿಂಗಳವರೆಗೆ ಭಗವಾನ್‌ಪುರದಲ್ಲಿ ನಡೆಸಿತು. ಆ ಸೇವಾಕಾರ್ಯದಲ್ಲಿ ಭಾಗವಹಿಸಲು ನಾನೂ ಹೋಗಬೇಕಾಯಿತು. ಸೇವಾಕಾರ್ಯಗಳೆಲ್ಲ ಮುಗಿದ ನಂತರ, ೧೯೧೪ರ ವೈಶಾಖ ಮಾಸದ ಮೊದಲ ವಾರದಲ್ಲಿ ಬೇಲೂರು ಮಠಕ್ಕೆ ನಾನು ಮರಳಿದೆ. ಒಂದು ದಿನ ಇದ್ದಕ್ಕಿದಂತೆ ಬೇಲೂರು ಮಠಕ್ಕೆ ಸುದ್ದಿ ಬಂತು, ಶರತ್ ಮಹಾರಾಜರಿಗೆ ಮೂತ್ರಪಿಂಡದಲ್ಲಿ (ಕಿಡ್ನಿ) ವಿಪರೀತ ನೋವುಂಟಾಗಿ ಹಾಸಿಗೆ ಹಿಡಿದಿದ್ದಾರೆ ಎಂದು. ಮೂರು-ನಾಲ್ಕು ದಿನಗಳ ನಂತರ ಬಾಬುರಾಮ ಮಹಾರಾಜರು ನನ್ನನು ಶರತ್ ಮಹಾರಾಜರ ಸೇವೆ ಮಾಡುವುದಕ್ಕಾಗಿ ಕಳುಹಿಸಿಕೊಟ್ಟರು. ಆಗ ಶ್ರೀಮಾತೆಯವರು 'ಉದ್ಬೋಧನ'ದಲ್ಲಿದ್ದರು. 'ಉದ್ಬೋಧನ'ಕ್ಕೆ ಹೋದ ಕೂಡಲೇ, ಮೊದಲು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದೆ. ಶ್ರೀಮಾತೆಯವರಲ್ಲಿ ಹಿಂದಿನ ಧೀರ, ಸ್ಥಿರ ಭಾವ ಈಗ ಕಂಡು ಬರಲಿಲ್ಲ. ನನ್ನನ್ನು ನೋಡಿ ಆವೇಗದಿಂದ ಶ್ರೀಮಾತೆ ಹೇಳಿದರು: ''ಏನಾಗುತ್ತದೆಯೋ - ನನ್ನ ಸೃಷ್ಟಿಧರ (ವಾಸುಕಿ) ಅನಾರೋಗ್ಯದಿಂದ ಮಲಗಿದ್ದಾನೆ.'' ಶ್ರೀಮಾತೆಯವರು ಹಿಂದೆಂದೂ ಈ ರೀತಿ ದುರ್ಬಲರಾಗಿದ್ದುದನ್ನು ನಾನು ಕಂಡಿರಲಿಲ್ಲ.

ಶರತ್ ಮಹಾರಾಜ್ ಮಲಗಿದ್ದರು. ನಿಧಾನವಾಗಿ ಅವರ ಹಾಸಿಗೆಯ ಬಳಿಗೆ ಬಂದು ನಿಂತುಕೊಂಡೆ. ಅವರು ಏನು ಹೇಳುತ್ತಿದ್ದರೋ ಅರ್ಥವಾಗಲಿಲ್ಲ. ಆಗ ಶ್ರೀ ನಿರ್ಮಲ್ (ಸ್ವಾಮಿ ಮಾಧವಾನಂದಜಿ) ನನಗೆ ತಿಳಿಯ ಹೇಳಿದರು. ಹತ್ತು-ಹನ್ನೆರಡು ದಿನಗಳಲ್ಲಿ ಶರತ್ ಮಹಾರಾಜರು ಗುಣಮುಖರಾದರು. ನಾನು ಬೇಲೂರು ಮಠಕ್ಕೆ ಮರಳಿದೆ.

೧೯೧೮ರ ಮೇ ತಿಂಗಳಲ್ಲಿ ನಾನು ಶರತ್ ಮಹಾರಾಜ್ ಮತ್ತು ಯೋಗಿನ್-ಮಾ ಅವರೊಂದಿಗೆ ವೃಂದಾವನದಲ್ಲಿದ್ದೆ. ಮೇ ೨೩ರಂದು ಕಲ್ಕತ್ತೆಗೆ ಹಿಂದಿರುಗಿದೆ. ಶರತ್ ಮಹಾರಾಜರು ವೃಂದಾವನದಲ್ಲಿ ಇದ್ದಾಗಲೇ ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಹೊಸ ಮನೆಯ ಗೃಹಪ್ರವೇಶ ನಡೆಯಿತು. ಈ ಉತ್ಸವದ ಬಗ್ಗೆ ಶರತ್ ಮಹಾರಾಜರಿಗೆ ಸ್ವಾಮಿ ಅರೂಪಾನಂದರು ಬರೆದಿದ್ದರು. ಹಲವು ವಿಷಯಗಳನ್ನು ತಿಳಿಸಿದ ನಂತರ ಹೀಗೆ ಬರೆದಿದ್ದರು: ''ಮನೆಯ ಗೃಹಪ್ರವೇಶಕ್ಕೆ ನೀವು ಬರಲಾಗದ ಕಾರಣ, ಶ್ರೀಮಾತೆಯವರ ಬಯಕೆಯೇನೆಂದರೆ, ನೀವು ಕಲ್ಕತ್ತೆಗೆ ಮರಳಿ ಬಂದ ನಂತರ ಒಂದು ಬಾರಿ ಜಯರಾಮಬಾಟಿಗೆ ಬಂದು ಮನೆ, ಕೋಣೆ ಇತ್ಯಾದಿಗಳೆಲ್ಲ ಹೇಗೆ ಮೂಡಿಬಂದಿವೆ ಎಂದು ನೋಡಿ ಹೋಗಬೇಕು ಅಂತ.''

ಶರತ್ ಮಹಾರಾಜ್ ಕಲ್ಕತ್ತೆಗೆ ಮರಳಿ ಬಂದ ಕೆಲವೇ ದಿನಗಳ ನಂತರ ಜಯರಾಮಬಾಟಿಗೆ ಹೊರಟರು. ಈ ಯಾತ್ರೆಯಲ್ಲೂ ನಾನು ಅವರೊಂದಿಗಿದ್ದೆ.

*(ಮುಂದಿನ ಸಂಚಿಕೆಗೆ)*

# ಗುರುಪೂರ್ಣಿಮೆಯ ಮಹತ್ವ

**ಡಾ. ಕೆ.ಎಲ್. ಪ್ರಸನ್ನಾಕ್ಷೀ**

ಗುರುವನ್ನು ಆರಾಧಿಸುವ ಹಾಗೂ ಗುರುವಿನ ಹಿಂದಿರುವ ಆಧ್ಯಾತ್ಮಿಕ ಶಕ್ತಿಯನ್ನು ಪೂಜಿಸುವ ಪವಿತ್ರ ದಿನವೇ 'ಗುರುಪೂರ್ಣಿಮೆ'. ಭಾರತೀಯ ಆಧ್ಯಾತ್ಮಿಕ ಪರಂಪರೆಯ ಭವ್ಯತೆಯ ದ್ಯೋತಕವಿದು. ಈ ಕುರಿತು ಇಲ್ಲಿ ಬರೆದಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.



### ಪೀಠಿಕೆ

ಸೃಷ್ಟಿ ಒಂದು ಅನು-ಕರಣೆ. ಪರಮಾತ್ಮನ ಪರಮಭಾವವಾದ ಸಚ್ಚಿದಾನಂದಾಮೃತವನ್ನು ಅಣು ಅಣುವಿನಲ್ಲೂ ಅದು ಅನುಕರಿಸುತ್ತದೆ. ಆದುದರಿಂದಲೇ 'ಸೃಷ್ಟಿ' ಆದ ಕೂಡಲೇ ಅದಕ್ಕೆ ಇರುವಿಕೆ (ಅಸ್ತಿ, ಸತ್) ಭಾವ ಉಂಟಾಗುತ್ತದೆ. ಆಗ ಅದು ಅನುಭವಕ್ಕೆ, ಜ್ಞಾನಕ್ಕೆ, ಇಂದ್ರಿಯಕ್ಕೆ ವಿಷಯವಾಗುತ್ತದೆ. ಅದೇ ಭಾತಿ, ಚಿತ್ ಎಂಬುದು. ಅದರಿಂದ ಹಿತ, ಆನಂದ, ಸುಖ ಸಂತೋಷಭಾವ ಉಂಟಾಗುತ್ತದೆ.

ಸೃಷ್ಟಿಯಲ್ಲಿರುವ ಈ ಅನು-ಕರಣ ಭಾವ ಮಾನವನಲ್ಲೂ ಮುಂದುವರಿಯುತ್ತದೆ. ಆದರೆ ಇಲ್ಲಿ ಅನು-ಕರಣ; ಸಚ್ಚಿದಾನಂದ ಭಾವರೂಪದಲ್ಲೇ ಅಲ್ಲದೆ, ಪ್ರಕೃತಿಯಲ್ಲಿರುವ ಪಶು ಪಕ್ಷಿ ಪ್ರಾಣಿಗಳ ಒಡನಾಡಿಗಳ ನಡೆನುಡಿಯ ಅನುಕರಣೆಯಲ್ಲೂ ಮುಂದುವರಿಯುತ್ತದೆ. ಇದು ಜೀವಿಗೆ ಎಲ್ಲ ರೀತಿಯಿಂದ ಉತ್ಕರ್ಷದಾಯಕವೂ ಶ್ರೇಯಃ ಪ್ರೇಯಃ ಕಾರಕವೂ ಆಗಿರಲೇಬೇಕು ಅಥವಾ ಆಗಿರುತ್ತದೆ ಎಂದು ಭಾವಿಸಲು ಬರುವುದಿಲ್ಲ. ಇವು ವ್ಯಕ್ತಿಯ ಅಧಃಪಾತಕ್ಕೂ ಅಪಕರ್ಷಕ್ಕೂ ಕಾರಣವಾಗಬಹುದು. ಈ ಜಾಗದಲ್ಲಿ ವ್ಯಕ್ತಿಗೆ ಧರ್ಮ-ಅಧರ್ಮ, ಉಚಿತ-ಅನುಚಿತ, ಸರಿ-ತಪ್ಪು ಮೊದಲಾದ ವಿವೇಕ ಅಗತ್ಯವಾಗುತ್ತದೆ. ಇಂತಹ ವಿವೇಕವನ್ನು ಕೊಡುವವನು 'ಗುರು'.

### ಗುರುಸ್ವರೂಪ

ಹುಟ್ಟುವ ಕಂದ ಕಾಣುವ ಮೊದಲ ಗುರು 'ಅಮ್ಮ'. ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು. ಕ್ರಮವಾಗಿ ಆ ಜೀವ ಸುತ್ತಲಿನ ಪರಿಸರ, ವ್ಯಕ್ತಿಗಳು, ಎಲ್ಲರ ಪ್ರಭಾವಕ್ಕೂ ಒಳಗಾಗುತ್ತಾ ಹೋಗುತ್ತದೆ. ಆಗ 'ತಂದೆ' 'ಬಾಲ್ಯದೊಳಕ್ಕರ ವಿದ್ಯೆಯ ಕಲಿಸದಿರ್ದೊಡೆ ಕೊಂದಂ, ಲಕ್ಕಧನ ಮಿರಲು, ಕೆಡುಗುಂ' ಎಂಬಂತೆ ಶಾಲೆಯ ವಿದ್ಯಾಭ್ಯಾಸವನ್ನು

ಕೊಡಿಸಿ ಮಗುವಿಗೆ 'ಗುರು' ಆಗುತ್ತಾನೆ. ಆದ್ದರಿಂದಲೇ ವೇದ ವಾಣಿ 'ಮಾತೃದೇವೋ ಭವ', 'ಪಿತೃದೇವೋ ಭವ' 'ಆಚಾರ್ಯ ದೇವೋ ಭವ' ಎಂದು ಅನುಕ್ರಮವಾಗಿ ಮೂವರನ್ನೂ ನಮಿಸುತ್ತದೆ, ಗೌರವಿಸುತ್ತದೆ, ದೇವತ್ವದ ನೆಲೆಯಲ್ಲಿ ಭಾವಿಸುತ್ತದೆ.

ಇಲ್ಲಿ ಪ್ರಧಾನವಾಗಿ ಗಮನಿಸಬೇಕಾದ ಅಂಶ ಜೀವಿ ನಡೆಯಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುತ್ತದೆ, ಎಂಬುದು. ಆದುದರಿಂದ ಸತ್ಯವನ್ನೇ ಹೇಳಬೇಕು ಎಂದು ಹೇಳುತ್ತಾ ಹಿರಿಯರು ತಾವು ಸುಳ್ಳಾಡುತ್ತಿದ್ದರೆ ಮಕ್ಕಳಿಗೆ ಅನುಕರಣೆಯಲ್ಲಿ ಗೋಜಲು ಗೊಂದಲ ಉಂಟಾಗುತ್ತದೆ. ಆದುದರಿಂದ ಯಾರನ್ನು ಗುರು ಎಂದು ಭಾವಿಸಬೇಕು? ನಾವು ಧರ್ಮವನ್ನು ಹೇಗೆ ಗ್ರಹಿಸಬೇಕು? ಎಂದು ಯುಧಿಷ್ಠಿರನು ಭೀಷ್ಮರನ್ನು ಪ್ರಶ್ನಿಸಿದಾಗ ಭೀಷ್ಮರು, **'ಸತ್ಯಂ ವದ ಧರ್ಮಂ ಚರ ಇತಿ ಶುಕಸಾರಿಕಾ ವಚನತೋ ನ ವಿಶಿಷ್ಯತೇ, ಅನನುಶಾಸಿತಾರಮಪಿ ಅನುಷ್ಠಾತಾರಂ ಆಚಾರ್ಯಮಿವ ಭಾವಯಂತಃ ನಿರವದ್ಯ-ಹೃದ್ಯೇಭ್ಯಃ ತಚ್ಚೇಷ್ಟಿತೇಭ್ಯಃ ಧರ್ಮಾನ್ ಸಂಗೃಹ್ಣೀಯುಃ..'** ಎಂದು ತಿಳಿಸುತ್ತಾರೆ. '' 'ಸತ್ಯಂ ವದ, ಧರ್ಮಂ ಚರ' – ಎಂದು ಆಜ್ಞೆಮಾಡದೆ ಯಾರು ತನ್ನ ನಡೆಯಲ್ಲಿ ಇವುಗಳನ್ನು ಆಚರಿಸುತ್ತಾನೋ ಅವನನ್ನು 'ಆಚಾರ್ಯ' ಎಂದು ಭಾವಿಸಿ ಅವನ ನಡೆಯಿಂದ ಧರ್ಮವನ್ನು ಸಂಗ್ರಹಿಸಬೇಕು'' – ಎಂದು ತಿಳಿಸುತ್ತಾರೆ.

ಆದುದರಿಂದ ಗುರುವಾಗುವವನಿಗೆ ತನ್ನ ನಡೆಯ ಕಡೆ ವಿಶೇಷ ಎಚ್ಚರಿಕೆ ಇರಬೇಕು. ಗುರುಕುಲದಲ್ಲಿ ಮಕ್ಕಳು ಗುರುವಿನೊಡನೆಯೇ ವಾಸಿಸುತ್ತಿರುತ್ತಾರೆ. ಆದುದರಿಂದಲೇ ತನ್ನ ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ ತನ್ನ ಮನೆಗೆ ಹಿಂದಿರುಗುವ ಶಿಷ್ಯನಿಗೆ ಗುರುವು : ಧರ್ಮ-ಅಧರ್ಮ-ಯುಕ್ತ-ಅಯುಕ್ತ ಇತ್ಯಾದಿ ಸಂಶಯಗಳು ಉಂಟಾದಾಗ **'ಯಾನ್ಯಸ್ಮಾಕಗ್ಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ, ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ'** ನಮ್ಮ ನಡೆಯ ಉತ್ತಮ ಭಾಗವನ್ನು ಸ್ವೀಕರಿಸಿ ಅನುಕರಿಸಬೇಕು, ನಮ್ಮ ನಡೆಯ ಶ್ರೇಷ್ಠತಮ ಕರ್ಮಗಳನ್ನು ಸೇವಿಸಬೇಕು – ಎಂದು ಉಪದೇಶಿಸುತ್ತಾರೆ.

### ಗುರು-ಭೇದ

ಈ ಗುರು ಯಾರು? ಗುರುವಿನ ಲಕ್ಷಣವೇನು? ಯಾರನ್ನು ನಾವು ಗುರು ಎಂದು ಪರಿಭಾವಿಸಬೇಕು ಎಂಬ ಪ್ರಶ್ನೆ ನಮ್ಮ ಮುಂದಾಗುತ್ತದೆ. ವಿದ್ಯೆಯನ್ನು ಕಲಿಯುವ ಪ್ರಥಮ ಹಂತದಲ್ಲಿ ಶರೀರ, ಇಂದ್ರಿಯ, ಬುದ್ಧಿಗಳು ಹಠ ಮಾಡುತ್ತವೆ. ಅವುಗಳನ್ನು ಬೆದರಿಸಿ ಕಲಿಯುವಂತೆ ಮಾಡುವವ 'ಶಿಕ್ಷಕ'. ಸ್ವಲ್ಪ ಆ ದಾರಿಗೆ ಇಂದ್ರಿಯ ಬುದ್ಧಿ ಬರುತ್ತಿದೆ ಎಂದಾದಾಗ ವಿಷಯಗಳ ಸ್ವರೂಪ ಮನದಟ್ಟಾಗುವಂತೆ ಬೋಧಿಸುವವ 'ಬೋಧಕ'. ಹಾಗೆ ತಿಳಿದ ವಿಷಯವನ್ನು ಜೀವನದಲ್ಲಿ ಪಡೆದುಕೊಳ್ಳುವಂತೆ ಮಾಡಬಲ್ಲವ 'ಅಧ್ಯಾಪಕ' (ಅಧಿ+ಆಪ-ಹೊಂದು) ವಸ್ತು ವಿಷಯಗಳ ಸ್ವಸ್ವರೂಪ ತಿಳಿಸಿ ಯುಕ್ತಾಯುಕ್ತ ಜ್ಞಾನ ಕೊಟ್ಟು ಅವುಗಳ ಬಳಿ ನಿಲ್ಲಿಸುವವ 'ಉಪನ್ಯಾಸಕ' (ಉಪ+ನ್ಯಾಸ ಇರಿಸು).

ಹೀಗೆ ಜೀವಿಯನ್ನು ಭೌತಿಕ ಕ್ಷೇತ್ರದಲ್ಲಿ ತಿದ್ದಿತೀಡಿ ಮುನ್ನಡೆಸುವವರು ಹಲವರು. ಅವರುಗಳು ತೋರಿದ, ಬೋಧಿಸಿದ, ಮುನ್ನಡೆಸಿದ ಮಾರ್ಗದಲ್ಲಿ ಸ್ವಪ್ರಯತ್ನದಿಂದ ಏಳುತ್ತಾ-ಬೀಳುತ್ತಾ, ಹಾದಿಯಲ್ಲಿ ಬರುವ ಅಡಚಣೆಗಳನ್ನೆಲ್ಲಾ ನಿವಾರಿಸಿಕೊಂಡು ಜೀವಿ ಗುರಿಯೆಡೆಗೆ ಸಾಗಬೇಕಾಗುತ್ತದೆ. ಇದು ಜೀವಿಯ ಲೌಕಿಕ ಬದುಕಿನ ಉತ್ಕರ್ಷಕ್ಕೆ, ಸುಖ ಕ್ಷೇಮ ಸಂಪತ್ಸಮೃದ್ಧಿ ಸದ್ಗುಣ ಸಚ್ಚೀಲಾದಿ ಗಳಿಕೆಗೆ ಸಹಾಯಕವಾಗುತ್ತದೆ.

### ಗುರು-ತತ್ತ್ವ

ಆದರೆ ಇದಿಷ್ಟು ಜೀವಿಯ ಪಾರಮಾರ್ಥಿಕ ಸಾಧನೆಗೆ ಸಾಲದು. ಆ ಬದುಕಿಗೆ ಮಾರ್ಗದರ್ಶಕನಾಗುವವನು –

ವೇದಾದಿವಿದ್ಯೆಯನ್ನು ಬಲ್ಲವನೂ, ಪಾಪರಹಿತನೂ 'ಬ್ರಹ್ಮ'ವನ್ನು ಅರಿತವನೂ, ಶಾಂತನೂ, ಉರುವಲು ಇಲ್ಲದ ಅಗ್ನಿಯಂತೆ ಪ್ರಜ್ವಲಿಸುವ ಕಾಂತಿಯಿಂದ ಅಂತಃಸತ್ವದಿಂದ ಬೆಳಗುತ್ತಾ, ನಮಿಸಿದವರನ್ನು ಉದ್ಧರಿಸಬಲ್ಲವನು ಆಗಿರಬೇಕು ಎಂದು 'ವಿವೇಕಚೂಡಾಮಣಿ' *(೩೩)* ತಿಳಿಸುತ್ತದೆ. ಜೀವಿಯ ಜನ್ಮಜನ್ಮಗಳ ಕರ್ಮರಾಶಿಯನ್ನೆಲ್ಲಾ, ಸುಟ್ಟುಭಸ್ಮ ಮಾಡಿಬಿಡುವ ಜ್ಞಾನಾಗ್ನಿಯನ್ನು ಕರುಣಿಸುವವನಾಗಿರಬೇಕು ಎನ್ನುತ್ತದೆ 'ಗುರುಗೀತೆ' *(೬೩)*. ವಿಶ್ವಾಂಡ ಬ್ರಹ್ಮಾಂಡವಾಗಿ ವ್ಯಾಪಿಸಿಕೊಂಡಿರುವ ಅಣುಅಣುವನ್ನೂ ತುಂಬಿಕೊಂಡಿರುವ ಆ ಪರತತ್ತ್ವದ ಸ್ವರೂಪವನ್ನು ತೋರಿಸಿಕೊಡಬಲ್ಲವನಾಗಿರಬೇಕು – ಶಮ ದಮ ಮೊದಲಾದ ಸಾಧನೆಯಿಂದ ತನ್ನನ್ನು ತಾನು ನಿಗ್ರಹದಲ್ಲಿಟ್ಟುಕೊಂಡಿದ್ದು, ನಿಗ್ರಹ ಅನುಗ್ರಹಾದಿಗಳನ್ನು ಮಾಡಬಲ್ಲವನು, ಬ್ರಹ್ಮಾನಂದ ಮತ್ತನೂ ಪರಮಸುಖವನ್ನು ಕರುಣಿಸುವವನೂ, ಕೇವಲ ಜ್ಞಾನವೇ ಮೂರ್ತಿವೆತ್ತಂತೆ ಇರುವವನೂ, ಭಾವಾದಿಗಳಿಗೆ ವಶನಾಗದವನೂ, ಸತ್ತ್ವರಜಸ್ತಮಸ್ಸುಗಳು ಇಲ್ಲದವನೂ, ಜೀವಿಗಳನ್ನು ಪಾರಮಾರ್ಥಿಕ ಮಾರ್ಗದಲ್ಲಿ ಮುನ್ನಡೆಸಬಲ್ಲವನೂ ಗುರುವಾಗುವನು.

ಪಾಂಡುರಂಗ ವಿಠ್ಠಲನ ಪರಮಭಕ್ತನಾದ ನಾಮದೇವ ವಿಠ್ಠಲನೊಡನೆ ಮಾತನಾಡುತ್ತಿದ್ದರೂ ಅವನು ಗುರುವನ್ನು ಆಶ್ರಯಿಸಬೇಕೆಂದು ವಿಠ್ಠಲ ಅವನಿಗೆ ಆದೇಶ ಮಾಡುತ್ತಲೇ ಇದ್ದ. ಆದರೆ ಅವನು ನಿರಾಕರಿಸುತ್ತಿದ್ದ. ಒಮ್ಮೆ ಅವನು ಪೂಜೆಗೆ ಎಲ್ಲಾ ಸಿದ್ಧತೆ ಮಾಡಿಕೊಂಡು ಕುಳಿತುಕೊಂಡ. ಅದೆಲ್ಲಿತ್ತೊ ಒಂದು ಬೆಕ್ಕು ಹಾರಿ ಬಂದು ಪೂಜಾಸಾಮಗ್ರಿಗಳನ್ನೂ ಅಭಿಷೇಕ ಪದಾರ್ಥಗಳನ್ನೂ ಎಲ್ಲ ಉರುಟಿ ಓಡಿ ಹೋಯಿತು. ಅತ್ಯಂತ ಕೋಪಗೊಂಡ ನಾಮದೇವ ಆ ಬೆಕ್ಕನ್ನು ಅಟ್ಟಿಸಿಕೊಂಡು ಹೋದ.